# ಶ್ರೀ ಜಗನ್ನಾಥದಾಸಾರ್ಯ ವಿರಚಿತ ಸುಳಾದಿಗಳು

## ಶ್ರೀಹರಿ ಮಹಿಮಾ ಸುಳಾದಿ

ರಾಗ ಅಭೋಗಿ

ಧ್ರುವತಾಳ

ಶುಭದ ಸುಂದರಕಾಯಾ ವಿಬುಧ ಸನ್ಮುನಿಗೇಯಾ
ಅಬುಜ ಜಾಂಡೋದರ ನಿರ್ವಿಕಾರ
ತ್ರಿಭುವನಾತ್ಮ ಭಾವನ ತ್ರಿಗುಣಾತೀತ ನಿತ್ಯ ದು -
ರ್ಲಭ ದುರ್ವಿಭಾವ್ಯ ದೂರೀಕೃತ ದುರಿತ
ನಭಗವರ ವಾಹನ್ನ ನಳಿನಲೋಚನ ಚನ್ನ
ಇಭರಾಜವರದ ಇಂದಿರೆ ಅರಸ
ಉಭಯ ಸ್ಥಾನದಿ ವ್ಯಾಪ್ತ ತತ್ತದ್ದೋಷ ನಿರ್ಲಿಪ್ತ
ಸಭೆಯೊಳು ದ್ರೌಪತಿಯ ಕಾಯ್ದ ಕರುಣಿ
ನಿಬಿಡ ಪಂಕದಿ ಶಿಗಬಿದ್ದು ಬನ್ನಬಡುವ
ಅಬಲರ ಉದ್ಧರಿಸೊ ಅಬುಧಿಶಯನ
ಸುಭುಜನಾಮಕ ಜಗನ್ನಾಥವಿಠ್ಠಲ ನಿನ -
ಗಭಿವಂದಿಸುವೆ ಎನಗಭಯವಿತ್ತು ಸಲಹೊ ॥ 1 ॥

ಮಟ್ಟತಾಳ

ಪ್ರತಿಪ್ರತಿ ಕಲ್ಪಸ್ಥ ಪ್ರತಿಪ್ರತಿ ಜೀವರಿಗೆ
ಪ್ರತಿಪ್ರತಿ ಯುಗಗಳಲಿ ಪ್ರತಿಪ್ರತಿ ದೇಹಕ್ಕೆ
ಕೃತ ಕರ್ಮಗಳರಿತು ಪಿತ ಜನನಿ ಭ್ರಾತ
ಸತಿಸುತ ಮುಂತಾದ ಇತರ ಜನರೊಳಿದ್ದು
ಗತಿ ತಪ್ಪಲಿಗೊಡದೆ ಒಬ್ಬೊಬ್ಬರೊಳಗೆ
ಹಿತವನೆ ಪುಟ್ಟಿಸಿ ಪೋಷ್ಯ ಪೋಷಕನೆನಿಸಿ
ವ್ರತತಿಜಾಂಡವ ಪೊರೆವೆ ನಿರ್ವ್ಯಾಜದಿ ನಿರುತ
ಪತಿತಪಾವನ ಜಗನ್ನಾಥವಿಠ್ಠಲ ನಿನ್ನಾ -
ದ್ಭುತ ಮಹಿಮೆಯ ತಿಳಿಯೆ ಶತಮೋದಗೊಶವೇ ॥ 2 ॥

ತ್ರಿವಿಡಿತಾಳ

ಕಂಥಪಟಗಳಿಗೆ ತಂತು ಜೋಡಿಸಿದಂತೆ
ಪಿಂತೆ ಮಾಡಿದ ಕರ್ಮ ತಂತುಗಳಿಂದಲಿ
ಅಂತವಿಲ್ಲದ ಜೀವ ತಿಂತಿಣಿಗಳ ಕಟ್ಟಿ
ಸಂತೆ ನೆರಹಿ ಜನರ ಅಂತರಂಗದಿ ನೆಲಿಸಿ
ಕಾಂತೆರೊಡನೆ ರಮಿಸಿ ಸಂತೋಷಗಳನೀವೆ
ಸಂತರಿಗೆ ಸರ್ವ ಕಾಲದಲಿ
ಎಂತೆಂತು ಸೇವಿಪ ಜಂತುಗಳಿಗೆ ಗತಿ
ಪ್ರಾಂತಕ್ಕೆ ಕೊಡುವೆ ಶ್ರೀಕಾಂತ ನೀನು
ಇಂಥ ವ್ಯಾಪಾರ ನೀ ಮಾಡುತ ಇರಲಾಗಿ
ಚಿಂತೆ ಬಡುವದ್ಯಾಕೊ ಜೀವರಿಗೆ
ಹೊಂತಕಾರಿ ಜಗನ್ನಾಥವಿಠ್ಠಲ ಬ್ರಹ್ಮ
ಕಂತುಹರಾದ್ಯರ ಸ್ವಾಂತಕ್ಕೆ ನಿಲುಕೆ ॥ 3 ॥

ಅಟ್ಟತಾಳ

ಆರಿಗೆ ಚಿಂತಿಸಲಾರಿಗೋಸುಗ ಪೋಗಿ
ಆರಿಗಾಲ್ಪರಿಯಲಿ ಆರೆನ್ನ ಸಲಹುವ -
ರಾರಿವರೆನಗೆ ನಾನಾರು ಜೀವರಿಗೆ ಸ -
ರೋರುಹ ಭವನ ಸುಚಾರು ಸೃಷ್ಟಿಯೊಳಗೆ
ದಾರುಕ ನಾನೋರ್ವ ಭಾರಕರ್ತನು ನೀನೇ
ಈರೇಳು ಭುವನ ವ್ಯಾಪಾರ ಮಾಡುವ ಸರ್ವ -
ಧಾರ ನೀನಿರೆ ಬಡಿವಾರವ್ಯಾಕೆನಗೆ ರ -
ಮಾರಮಣನೆ ಜಗನ್ನಾಥವಿಠ್ಠಲ ಪರಿ -
ವಾರ ನಿನ್ನದು ಕಾಯೊ ಕಾರುಣ್ಯನಿಧಿ ಬೇಗ ॥ 4 ॥

ಆದಿತಾಳ

ಏಸೇಸು ಕಲ್ಪದಲ್ಲಿ ಶ್ರೀಸತ್ಯಾದಿ ಜಗತ್ತು
ಈಶಾವಾಸ್ಯವೆಂದು ಭೂಸುರೋತ್ತಮರು ಪೇಳ್ವ

ರೈಸೇ ಅನ್ಯಥಾ ಉಂಟೆ ವಾಸುದೇವನೆ ಜೀವ
ರಾಶಿಗಳೊಳಗಿದ್ದು ದೋಷಫಲಗಳುಣಿಸ -
ಲೋಸುಗ ಸ್ಥೂಲದೇಹ ನೀ ಸಂಬಂಧಿಸಿ ಹೃದಯಾ -
ಕಾಶದೊಳು ನೀನಿದ್ದು ಕ್ಲೇಶ ಸುಖಗಳೀವೆ
ನೀ ಸ್ವತಂತ್ರನಾಗಿ ಅಜಭವ ಸುರಾದಿಗಳಾ -
ಯಾಸವಿಲ್ಲದೆ ಪೊರೆವೆ ಶಾಶ್ವತ ಮೂರುತಿ
ವಾಸವಾನುಜ ಜಗನ್ನಾಥವಿಠ್ಠಲ ನಿನ್ನ
ದಾಸನ ಅಪರಾಧ ಲೇಶ ನೋಡದೆ ಕಾಯೊ ॥ 5 ॥

ಜತೆ

ಅನಂತ ಜೀವರು ನಿನ್ನಾಧೀನರೋ ಶ್ರೀ ಜ -
ಗನ್ನಾಥವಿಠ್ಠಲ ಪ್ರಪನ್ನವತ್ಸಲ ನೀನೂ ॥

## ಶ್ರೀ ಲಕ್ಷ್ಮೀನೃಸಿಂಹ ಸುಳಾದಿ

ರಾಗ ನಾಟ

ಧ್ರುವತಾಳ

ದುರಿತವನಕುಠಾರಿ ದುರ್ಜನ ಕುಲವೈರಿ
ಶರಣಾಗತವಜ್ರಪಂಜರ ಕುಂಜರ -
ವರಸಂರಕ್ಷಕ ಜನ್ಮಮರಣರಹಿತ ಮಹಿತ
ಪರಮಕರುಣಾ ಸಿಂಧು ಭಕುತಬಂಧು
ಸ್ವರತ ಸ್ವತಂತ್ರ ಜಗದ್ವ್ಯಾಪಿತ ಚಿತ್ಸುಖಪೂರ್ಣ
ಹರಿಯೆ ಕ್ಷರಾಕ್ಷರಪುರುಷೋತ್ತಮ
ಉರುಗಾಯ ವೈಕುಂಠವರಮಂದಿರ , ಚಂದಿರ -
ತರಣಿಕೋಟಿಸಂಕಾಶ ವಿಮಲಕೇಶ
ಧುರದೊಳಗರ್ಜುನನ ತುರಗನಡೆಸಿದ ಸಂ -
ಗರ ಭಯಂಕರ ಲೋಕೈಕವೀರ

ನರಸಿಂಹ ನಿನ್ನ ಪಾದಕ್ಕೆರಗಿ ಬಿನ್ನೈಸುವೆ
ಮೊರೆಹೊಕ್ಕ ದಾಸಗೆ ಬಂದ ಭಯವ
ಪರಿಹರಿಸಿ ಸೌಖ್ಯವ ಕರುಣಿಸು ದಯದಿಂದ ಸರುವರಂತರ್ಯಾಮಿ ಲೋಕಸ್ವಾಮಿ
ಸ್ಮರಣೆ ಮಾತ್ರದಿ ಅಜಾಮಿಳಗೆ ಮುಕ್ತಿಯನಿತ್ತೆ
ಅರಿದೆನೊ ನೀನೆಮ್ಮ ಪೊರೆವುದೀಗ
ಸರುವಕಾಮದ ಜಗನ್ನಾಥವಿಠ್ಠಲ ಭಕ್ತ -
ಪರಿಪಾಲಕನೆಂಬ ಬಿರುದು ನಿನ್ನದಲ್ಲವೇ ॥ 1 ॥

ಮಟ್ಟತಾಳ

ವಿಧಿಪಿತ ನೀನಲ್ಲದೆ ನಿಧಿಪತಿಗಳು ಉಂಟೆ
ಸಧನನಾಗಿ ಇರ್ಪೆ ನಿನ್ನ ದಾಸರಿಗಾಗಿ
ಮಧುಸೂದನ ಜಗನ್ನಾಥವಿಠ್ಠಲರೇಯ
ನಿಧನನೆನಿಸಿಕೊಂಡೆ ನಿನ್ನ ದ್ವೇಷಿಗಳಿಗೆ ॥ 2 ॥

ರೂಪಕತಾಳ

ಮೂರುಲೋಕಸ್ವಾಮಿ ಸರ್ವಜ್ಞ ಸುಖಪೂರ್ಣ
ಪ್ರೇರಣಸಾಕ್ಷಿ ಕಾರಣಕಾರ್ಯ ದೋಷವಿ -
ದೂರ ಸದ್ಗುಣಸಾಂದ್ರ ಸಜ್ಜನಾಂಬುಧಿಚಂದ್ರ
ಭಾರಕರ್ತ ಜಗಕೆ ನೀನಿರೆ ಎಮ್ಮ ಮ -
ನೋರಥ ಸಲಿಸುವುದೇನಸಾಧ್ಯವೊ ನಿನಗೆ
ಕ್ರೂರಮಾನವರ ಸಂಹಾರ ಮಾಡಿಸು ಗುರು -
ಮಾರುತನಿಂದತಿ ಶೀಘ್ರವಾಗಿ
ನೀ ರಕ್ಷಿಸೆಂದು ಪ್ರಾರ್ಥಿಸುವ ಭಕ್ತಗೆ ಭೂರಿ
ಸಾರಭಾಗ್ಯವನಿತ್ತು ಕೃಪೆಮಾಡು ಅನುದಿನ
ಶೂರ ಜಗನ್ನಾಥವಿಠ್ಠಲ ನೀನಲ್ಲದಿ -
ನ್ನಾರು ಭಕ್ತರ ಕಾವ ಕರುಣಿಗಳು ಜಗದೀ ॥ 3 ॥

ಝಂಪೆತಾಳ

ಪಿತನಿಂದ ನೊಂದ ಪ್ರಹ್ಲಾದನ ಕಾಯ್ದೆ , ದೇ -

ವತೆಗಳಿಗೆ ಬಂದ ಭಯ ಪರಿಹರಿಸಿ, ದಯದಿ ದ್ರೌ -
ಪತಿಯ ಮೊರೆಕೇಳಿ ದಿವ್ಯಾಂಬರವ ಕರುಣಿಸಿದೆ
ಕ್ಷಿತಿಜನಾಲಯದಿ ಬಳಲುವ ಬಾಲೆಯರ ದ್ವಾರಾ -
ವತಿಗೆ ಕರೆದೊಯ್ದು ಒಲಿದವರ ಪೋಷಿಸಿದೆ ; ಮಾ -
ರುತಿಯ ಕರದಿಂದ ಬೃಹದ್ರುಥನ ಕುವರನ ಕೊಲಿಸಿ
ಪೃಥಿವಿಪರ ಬಿಡಿಸಿ ಪಾಲಿಸಿದೆ ಕರುಣದಲಿ ; ಕುರು -
ಪೃತನೆಯೊಳು ಪಾಂಡವರ ಗೆಲಿಸಿ ಕೀರ್ತಿಯನಿತ್ತೆ
ಶತಮೋದನಾಸ್ತ್ರದಿಂದಲಿ ಗರ್ಭದೊಳಗೆ ಪೀ -
ಡಿತನಾದ ಶಿಶುಪರೀಕ್ಷಿತನ ಸಂತೈಸಿದೆ
ಶಿತಿಕಂಠಗೊಲಿದು ಸಾಯಕನಾಗಿ ಮುಪ್ಪುರದ
ಸತಿಯರನು ಒಲಿಸಿ ಕೀರುತಿಯಿತ್ತೆ ಭಕುತನಿಗೆ
ಮಿತಿಯುಂಟೆ ನಿನ್ನ ಕರುಣಕ್ಕೆ ದೇವವರ್ಯ ಸಾಂ -
ಪ್ರತ ಬೇಡಿಕೊಂಬೆ ಬಿನ್ನಪಕೇಳಜಸ್ರ ಸಂ -
ಸ್ತುತಿಪ ಭಕುತರ ಮನೋರಥವ ಪೂರೈಸು ಸು -
ವ್ರತನಾಮ ಶ್ರೀಜಗನ್ನಾಥವಿಠ್ಠಲ ಭಾಗ -
ವತಜನಪ್ರೀಯ ನೀನೆ ಗತಿ ಎಮಗೆ ಇಹಪರದಿ ॥ 4 ॥

ತ್ರಿವಿಡಿತಾಳ

ನೀ ಸಲಹಲಿನ್ನಾರು ಬಂದ -
ಡ್ಡೈಸುವರು ಮೂಲೋಕದೊಳಹೊರ -
ಗೀ ಸಮಸ್ತ ದಿವೌಕಸರು ನಿನ -
ಗೇ ಸಮರ್ಪಕವಾದ ಕಾರ್ಯ ಮ -
ಹಾಸುಖದಿ ನಡೆಸುವರು ನಿರುತ ಲಕ್ಷ್ಮೀ
ದಾಸಿ ಎಂದೆನಿಪಳು ನಿನ್ನರಮನೆಯಲ್ಲಿ
ದೇಶಕಾಲಗುಣಕರ್ಮಾದಿಗಳು ನಿನಗಾ -
ವಾಸಯೋಗ್ಯಸ್ಥಾನವೆಂದೆನಿಪವು
ಈಶಲೋಕತ್ರಯಕೆ ಲೇಸಾಯಾಸ ಕಾಣೆನೋ ಕರು -
ಣಾಸಮುದ್ರನೆ ಒಲಿದು ಎಮ್ಮ ಅಭಿ -
ಲಾಷೆ ಪೂರೈಸೆಂದು ಬೇಡಿಕೊಂಬೆನೋ ; ವೇದ -
ವ್ಯಾಸ ಕೀಟಗೆ ನೀನೇ ಒಲಿದು ಕೊಟ್ಟೆ ಮ -
ಹಾಸಿಂಹಾಸನವನೇರಿಸಿ ಪೊರೆದೆಯೋ ಪ -

ರಾಶರಾತ್ಮಜ ನಿನ್ನ ಗುಣಗಣಬಣ್ಣಿಸೆ
ನಾ ಸಮರ್ಥನೆ ಎಂದಿಗಾದರು ದೇವ
ನೀ ಸುಲಭನೆಂದಾಶ್ರಯಿಸಿಂದು ನಾ ಬಿ -
ನ್ನೈಸಿದೆನೊ ಈ ರೀತಿಯಲ್ಲಿ ಸ -
ರ್ವಾಸುನಿಲಯ ಜಗನ್ನಾಥವಿಠ್ಠಲರೇಯ
ಈಸು ಮಾತುಗಳ್ಯಾಕೆ ಮನ್ಮನ -
ದಾಸೆ ಪೂರ್ತಿಯ ಮಾಡಿ ಎಮ್ಮನು -
ದಾಸಿಸದೆ ದಯದಿಂದ ನೋಳ್ಪುದು ॥ 5 ॥

ಅಟ್ಟತಾಳ

ನಿಗಮತತಿಗಳಿಗೆ ವೇದ್ಯವಾದ ನಿನ್ನ
ಅಗಣಿತ ಮಹಿಮೆ ಲಕುಮಿಬೊಮ್ಮಭವಾ -
ದಿಗಳು ತಾವರಿಯರು ಸಾಕಲ್ಯದಿ ಮಂದಜೀ -
ವಿಗಳಿಗೆ ಗೋಚರಿಸುವುದೆ ನಿನ್ನ ರೂಪ
ಭಗವಂತ ನೀನೆ ದಯಾಳು ಎಂದರಿದು ನಾ
ಪೊಗಳಿದೆನೊ ಯಥಾಮತಿಯೊಳಗೆ ಲೇಶ
ಬಗೆಯದಿರೆನ್ನಪರಾಧಕೋಟಿಗಳ
ಜಗತ್ಪತಿ ತನ್ನ ಮಗುವಿನ ತೊದಲು ಮಾ -
ತುಗಳನೆ ಕೇಳಿ ತಾ ನಗುತಲಿ ಕಾಮಿತ
ಬಗೆಬಗೆಯಿಂದ ಪೂರ್ತಿಸಿ ಮಿಗೆ ಹರುಷದಿ
ಬಿಗಿದಪ್ಪಿ ಮೋದಿಪನಲ್ಲದೆ ಶಿಶುವನು
ತೆಗೆದು ಬಿಸುಟು ಮತ್ತೆ ಹಗೆಗೊಂಬನೇನೋ ತ್ರೈ -
ಯುಗನೆ ಬಿಡದೆ ಪಾಡಿ ಪೊಗುಳುವ ದಾಸಗೀ -
ಬಗೆ ಬಡತನವ್ಯಾಕೊ ಸಂಸಾರದೊಳಗೆ ನಾ -
ಲ್ಮೊಗನಯ್ಯ ಅರ್ಥಕಾಮಗಳೊಳಗಿಪ್ಪ ಈ -
ರ್ವಗೆರೂಪ ಒಂದಾಗೆ ಆವುದಸಾಧ್ಯವೊ
ಗಗನಭೂಪಾತಾಳವ್ಯಾಪ್ತರೂಪನೆ ಕರ
ಮುಗಿವೆ ಗೋಚರಿಸೆನ್ನ ದೃಗುಯುಗಗಳಿಗಿಂದು
ಯುಗಕರ್ತ ಶ್ರೀಜಗನ್ನಾಥವಿಠ್ಠಲ ನರ -
ಮೃಗನಾಗಿ ಸ್ತಂಭದಿಂದೊಗೆದು ಬಂದೊದಗಿದೆ ॥ 6 ॥

ಏಕತಾಳ

ಶ್ರೀನಿಧಿ ಪ್ರತಿದೇಹಂಗಳಲ್ಲಿ ಗತಿ
ನೀನಲ್ಲದೆ ಎನಗಾರಿಹಪರದಲ್ಲಿ
ಆ ನಳಿನಭವಾದ್ಯನಿಮಿಷ -
ರಾ ನಿಜಾನಂದವರಿತು ಫಲಗಳ ಕೊಡುವಿ ಮ -
ಹಾನುಭಾವ ಎಮ್ಮಭಿಮತ ಸಲಿಸುವು
ದೇನಚ್ಚರಿ ನಿನ್ನರಸಿ ಲಕುಮಿ ಕಡೆ -
ಗಾಣಳು ಪರಮೈಶ್ವರ್ಯದ ಪ್ರಾಂತ ಚಿ -
ದಾನಂದಮಯನೆ ಪ್ರಣತರ ಅಧಿಕಾ -
ರಾನುಸಾರ ಸುಖವನಧಿಯೊಳೋಲ್ಯಾಡಿಸುವಿ
ದಾನಿಗಳರಸ ಮನಾದಿಕರಣಗಳಭಿ -
ಮಾನಿಗಳಿಗೊಡೆಯನೆನಿಸುವ ಮುಖ್ಯ -
ಪ್ರಾಣಪತಿಗೆ ನೂತನ ವಿಜ್ಞಾಪನ -
ವೇನುಂಟಿನ್ನನುದಿನದಲಿ ಮಾಳ್ಪುದು
ಮಾನದ ಗುರು ಜಗನ್ನಾಥವಿಠ್ಠಲ ಕರು -
ಣಾನಿಧಿ ಸರ್ವದಾ ಸುಲಭ ನೀನಲ್ಲವೆ ॥ 7 ॥

ಜತೆ

ಚಟುಲಕಾರ್ಯಗಳ ಸಂಘಟನೆ ಮಾಡಿಸುವಿ ನಿ -
ಷ್ಕುಟಿಲ ಶ್ರೀಜಗನ್ನಾಥವಿಠ್ಠಲ ದೇವೋತ್ತಮ ॥

## ವರದ ಸುಳಾದಿ

ರಾಗ ಆನಂದಭೈರವಿ

ಧ್ರುವತಾಳ

ವರದ ವರದ ಶೋಭಿವರ ವರದಾಯಕ

ಪರಮ ಪುರುಷೋತ್ತಮ ಅಮಿತ ಮಹಿಮ
ಶರಣಾಗತರ ಕಲ್ಪತರುವೆ ವಿಮಲಾಂಬುರುಹ
ನಿರುಪಮ ನಿರ್ದೋಷ ನಿಖಿಳ ನಿಷೇಧ ಶೇಷ
ಮರಣ ಜನನ ರಹಿತ ಲೋಕಮಹಿತ
ಶಿರಿ ಸರಿಸಿಜ ಭವ ವಾಯು ವಾಣಿ ಭಾರತಿ
ಗರುಡ ಶೇಷ ಇಂದ್ರ ದೇವೋತ್ತಂಸ ಹಂಸಾ
ಸ್ವರತ ಸ್ವತಂತ್ರನೆ ಸುಗುಣಭರಿತ ಸೌಭಾಗ್ಯವಂತ
ನಿರುತ ಎನ್ನಂತರಂಗವಾಸ ಶ್ರೀಶಾ
ಹರಿಯೆ ನೀನಲ್ಲದನ್ಯರನರಿಯೆ ಎಮ್ಮ ಸಾಕುವ
ಧೊರಿಯೆ ದೂರುವೆ ಎನ್ನ ಮೊರೆಯ ಕೇಳೊ
ಮರಳಿ ಮರಳಿ ಎನ್ನ ದುರುಳ ವಿಷಯಂಗಳಿ -
ಗೆರಗಿಸಿ ಕಂಗೆಡಿಪ ಕರಣಂಗಳು
ಇರುಳು ಹಗಲು ನಿನ್ನ ಪರವಾಗಿರಲಿ ಬಾಹ
ದುರಿತ ಕೋಟಿಗಳಿಗೆ ಅಂಜೆ ನಾನು
ಸುರುಚಿ ನಾಮಕ ಜಗನ್ನಾಥವಿಠ್ಠಲ ನಿಜ
ಕರುಣಿ ಕೈ ಪಿಡಿದೆನ್ನುದ್ಧರಿಸಬೇಕೊ ॥ 1 ॥

ಮಟ್ಟತಾಳ

ಈಶ ಪೂರ್ಣಕಾಮ ದೋಷರಹಿತ ಸ್ವಪ್ರ -
ಕಾಶ ಲಕುಮಿ ವಾರಿಜಾಸನ ಮೊದಲಾದ -
ಶೇಷ ದಿವಿಜರಿಂದ ನೀ ಸೇವಿತನಾಗಿ
ದೇಶ ಕಾಲಗಳಲ್ಲಿ ವಾಸವಾಗಿಯಿಪ್ಪ
ವಾಸುದೇವನೆ ನಿನ್ನ ಉಪಾಸನೆ ಮಾಡದಲೆ
ಕ್ಲೇಶಕೆ ಒಳಗಾದೆ ಪಾಶಧರಾರ್ಚಿತನೆ
ಘಾಶಿಗೊಳಿಸದೆನ್ನ ಪೋಷಿಸಬೇಕಿನ್ನು
ವಾಸವಾನುಜ ಜಗನ್ನಾಥವಿಠ್ಠಲ ಲೌಕೀ -
ಕಾಶೆ ಬಿಡಿಸಿ ನಿನ್ನ ದಾಸನೆನಿಸಿ ಸಲಹೊ ॥ 2 ॥

ತ್ರಿವಿಡಿತಾಳ

ಕರಣನಾಮಕನಾಗಿ ಇಂದ್ರಿಯಗಳೊಳು ಮಾನಿ

ಸುರರೊಳು ನೆಲೆಸಿದ್ದು ವಿವಿಧ ವಿಷಯಂಗಳಾ
ನೆರವಿಗಳೊಳಗಿದ್ದು ನಿನ್ನ ರೂಪವ
ಬೆರಸಿ ಅರಿಯಗೊಡದೆ ವಿಹರಿಸುತಿಪ್ಪೆ
ಗುರಿ ಮಾಡಿ ಜೀವರ ಪುಣ್ಯಪಾಪಗಳಿಗೆ
ನಿರಯ ಸ್ವರ್ಗಗಳೀವೆ ಲೀಲೆಯಿಂದ
ಪರಿಪೂರ್ಣ ಕಾಮ ಈ ಪರಿ ಸಂಸಾರದೊಳೆಮ್ಮ
ತಿರುಗಿಸಿ ನೀ ಕ್ರೀಡೆಯಾಡುತಿಪ್ಪೆ
ವಿರಜಾನಾಮಕ ಜಗನ್ನಾಥವಿಠ್ಠಲ ಕರ -
ವೆರಡು ಮುಗಿವೆ ಎಮ್ಮುದ್ಧರಿಸುವ ಭಾರ ನಿನ್ನದೂ ॥ 3 ॥

ಅಟ್ಟತಾಳ

ಆ ಚತುರ್ಮುಖ ರಜತಾಚಲ ನಿಲಯಾದಿ
ಖೇಚರರಿಗೆ ಮನೊವಾಚಾಮಗೋಚರ
ಪ್ರಾಚೀನ ಕರ್ಮಾಬ್ಧಿ ವೀಚಿಯೊಳಗೆ ಮುಣು -
ಗೀ ಚಾರಿವರಿವಂಗೆ ಗೋಚರಿಸುವೆ ವಿ -
ರೋಚನ ಕೋಟಿ ಮರೀಚಿ ಪುಂಜನೆ ಭವ -
ಮೋಚಕ ನೀನೆಂದು ಸೂಚಿಸಿದರು ಶ್ರೀಮ -
ದಾಚಾರ್ಯರು ಈ ಚರಾಚರದಲ್ಲಿ
ನೀಚರಿಗೆ ಕರ ಚಾಚದಂತೆ ಮಾಡೊ
ಯಾಚಿಸುವೆನು ಸವ್ಯಸಾಚಿವರದ ವಿ -
ರೋಚನ ಶ್ರೀಜಗನ್ನಾಥವಿಠ್ಠಲ ನಿನ್ನಾ -
ಲೋಚನೆ ಕೊಡುವದು ಸಾಚಾರಿಗಳ ಕೂಡಾ ॥ 4 ॥

ಆದಿತಾಳ

ಅನಘಾ ನೆಂದೊಮ್ಮೆ ನೆನೆವ ಮಾನವ ಭವ -
ವನಧಿ ದಾಟುವ ಬಂಧು ಜನರ ಕೂಡಿಕೊಂಡು
ವನಿತಾದಿ ವಿಷಯಗಳನುಭವಿಸುತ ತನ್ನ
ಮನೆಯೊಳಗಿರಲಾ ಜೀವನವೇ ಮುಕ್ತನೊ
ಅನಿಮಿಷ ಮುನಿ ಭಾನುತನಯ ಲೋಕದಲಿ ನಾರಾ -
ಯಣ ನೆನೆ ನರಕಸ್ಥ ಜನರು ಮುಕ್ತರಾಗರೇ

ಘನಮಹಿಮನೆ ನಿನ್ನ ಅನುಸ್ಮೃತಿ ಉಳ್ಳವ
ಮನುಜನಾಗಲಿ ಮತ್ತೆ ದನುಜನಾಗಲಿ ತ್ರಿಭು -
ವನದೊಳು ಮಾನ್ಯನೊ ಅನುಮಾನವಿಲ್ಲ ಪ್ರತ -
ರ್ದನ ನಾಮ ಜಗನ್ನಾಥವಿಠ್ಠಲ ಪ್ರಹ್ಲಾದ ವಿರೋ -
ಚನ ನಿರಋತಿ ವಿಭೀಷಣರಿಗೊಲಿದು ಕಾಯಿದೇ ॥ 5 ॥

ಜತೆ

ಭಕ್ತವತ್ಸಲ ಜಗನ್ನಾಥವಿಠ್ಠಲ ಮುಕ್ತಾ
ಮುಕ್ತ ನಿಯಾಮಕ ಅಶಕ್ತನ್ನ ಕೈಪಿಡಿಯೊ ॥